ಕಾರ್ಖಾನೆ, 22ನೆ ಡಿಸೆಂಬರ್ 1906.

ನಂ. ಆರ್. 6312—ಫಾ. 64-05—15, 1900ನೆ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳ ಮೇರೆಗೆ, ಈ ಇಸ್ತಿಹಾರ್‌ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿರುವ ಚತುರ್ಗಡಿಗಳಿಗೆ ಳ್ಳ ಪ್ರದೇಶವು ಸದರಿ ಇಸ್ತಿಹಾರಿನ ಕೆಳಗೆ ವಿವರಿಸಿರುವ ಹಕ್ಕುಗಳ ಜಿಲ್ಲಾವಣಿಗೆ ಒಳಪಟ್ಟು 1907ನೆ ಇಸವಿಯ ಜನವರಿ 1ನೆ ತಾರೀಖಿನಿಂದ "ಸಂಸ್ಥಾನ ಜಂಗಲಿ" ಎಂದು ಭಾವಿಸಲ್ಪಡುವುದೆಂಬ ಪ್ರಕಟನೆಯು ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ :—

ಷೆಡ್ಯೂಲ್

ಡಿವಿಷನ್	ತಾಲ್ಲೂಕುಗಳು	ಸಮೀಪದ ಅಂಚೆ ಆಫೀಸು	ಸಮೀಪದ ತಾಲ್ಲೂಕು ಆಫೀಸು	ಚತುರ್ಗಡಿ.
ಬನವಾಸಿ	ನಗರ ಮತ್ತು ಹೆರ್ಕಣಿ	2	ನಗರ	ಉತ್ತರಕ್ಕೆ :—ಕಳಸ, ಮಸ್ಕಾನಿ ಮತ್ತು ವಡಾಹೊಸಹಳ್ಳಿ ಗ್ರಾಮಗಳ ಮುಕ್ತಾಯದ ಬಾಂದುಗಳಿಂದ ಎಲ್ಲೆಯ ರೇಖೆಯು ಹೊರಟು ಆಗ್ನೇಯವಾಗಿ ಕಳಸಿ ಗ್ರಾಮದ ದಕ್ಷಿಣ ಮೇರೆಯಲ್ಲಿ ಸುಮಾರು 6 ಫರ್ಲಾಂಗುಗಳ ದೂರದ ವರೆಗೆ ಮತ್ತು ಈಶಾನ್ಯಕ್ಕೆ ಕಳಸಿ ಮತ್ತು ಗುಬ್ಬಿಗ ಗ್ರಾಮಗಳ ದಕ್ಷಿಣ ಮೇರೆಗಳಲ್ಲಿ ಬೆಳ್ಳೂರು ಗ್ರಾಮದ 4ನೆ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಆಗ್ನೇಯಕ್ಕೆ ಗುಬ್ಬಿಗ ಮತ್ತು ಕೋಡಿ ಗ್ರಾಮಗಳ ದಕ್ಷಿಣ ಮೇರೆಗಳಲ್ಲಿ ಕೋಡಿ ಗ್ರಾಮದ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ :—ಅಲ್ಲಿಂದ ತಮ್ಮಡಿಹಳ್ಳಿ ಗ್ರಾಮದ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗಿ ಅಲ್ಲಿ ಆಯನೂರು ಹೈರೋಡನ್ನೂ ಕಂಕರ ಸಂಸ್ಥಾನ ಜಂಗ್ಲಿಯ ಪಶ್ಚಿಮ ಮೇರೆಯನ್ನೂ ಸೇರುತ್ತದೆ; ಅಲ್ಲಿಂದ ಸದರಿ ಸಂಸ್ಥಾನ ಜಂಗ್ಲಿಯ ಪಶ್ಚಿಮ ಮೇರೆಯಲ್ಲಿ ಹೈರೋಡಿನ ಎಡಭಾಗಕ್ಕೆ ಸಂಸ್ಥಾನ ಜಂಗ್ಲಿಯ ನೈರುತ್ಯ ಮೂಲೆಗೆ ಹೋಗಿ ಅಲ್ಲಿ ಕೆಟ್ಟಿಹಳ್ಳಿ ಗ್ರಾಮದ ಮೇರೆಯ ವಾಯವ್ಯ ಮೂಲೆಯ ಬಾಂದುಗಳನ್ನು ಸೇರುತ್ತದೆ; ಅಲ್ಲಿಂದ ಕೆಟ್ಟಿಹಳ್ಳಿ ಹಗ್ಗಳತಿ ಮತ್ತು ತೋಟದ ಕೊಪ್ಪದ ಪಶ್ಚಿಮ ಮೇರೆಗಳಲ್ಲಿ ತೋಟದ ಕೊಪ್ಪದ ಸರಹದ್ದಿನ ನೈರುತ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ :—ಅಲ್ಲಿಂದ ಗೆರ್ಗ ಮತ್ತು ವೆಂಕಣ್ಣಹಳ್ಳಿ ಗ್ರಾಮಗಳ ಉತ್ತರ ಮೇರೆಗಳಲ್ಲಿ ವೆಂಕಣ್ಣಹಳ್ಳಿ ಗ್ರಾಮದ ವಾಯವ್ಯ ಮೂಲೆಗೆ ಹೋಗಿ, ಅಲ್ಲಿಂದ ಜೋಗಿಕೊಪ್ಪ ಗ್ರಾಮದ ಉತ್ತರ ಮೇರೆಯಲ್ಲಿ ಸುಮಾರು $1\frac{1}{2}$ ಫರ್ಲಾಂಗುಗಳ ದೂರ ಹೋಗುತ್ತದೆ. ಪಶ್ಚಿಮಕ್ಕೆ :—ಅಲ್ಲಿಂದ ಜೋಗಿಕೊಪ್ಪ, ಯೋಗಮಳಲಿ, ಹಾರಂಬಳ್ಳಿ, ಯೋಗ, ವಾಟೆಗಾರು ಮತ್ತು ವಡಾಹೊಸಹಳ್ಳಿ ಗ್ರಾಮಗಳ ಪೂರ್ವ ಮೇರೆಯಲ್ಲಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಎ. ಷರಾಗಳು :—

ಈ ತಾಕಿನಲ್ಲಿ ಈ ಕೆಳಗೆ ನಮೂದಿಸುವ ದಾರಿಯ ಹಕ್ಕುಗಳನ್ನು ಮಂಜೂರ್ಮಾಡಿ ಇದೆ :—

(1) ಬೆಳ್ಳೂರಿಂದ ಆಯನೂರಿಗೆ ಹೋಗುವ ಗಾಡಿದಾರಿ, 15 ಅಡಿಗಳ ಅಗಲ ಮತ್ತು 1 ಫರ್ಲಾಂಗು ಉದ್ದ; ವರ್ಷವೆಲ್ಲಾ ಜನಗಳೂ, ದನಗಳೂ, ಮತ್ತು ಗಾಡಿಗಳೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು ಸರ್ವೆ 4ನೆ ನಂಬರಿನ ವಾಯವ್ಯ ಮೂಲೆಯಿಂದ ನೈರುತ್ಯಕ್ಕೆ ಸುಮಾರು 3 ಫರ್ಲಾಂಗುಗಳ ದೂರದಲ್ಲಿ 1ನೆ ನಂಬರ್ ಆವರಣದ ಪಶ್ಚಿಮ ಮೇರೆಯಲ್ಲಿ ಬಂದು ಸ್ಥಳದಲ್ಲಿ, ಸಂಸ್ಥಾನ ಜಂಗ್ಲಿಯನ್ನು ಪ್ರವೇಶಿಸಿ, ಉತ್ತರಕ್ಕೆ ಸುಮಾರು 1 ಫರ್ಲಾಂಗುನೂರ ಸರ್ವೆ 3ನೆ ನಂಬರಿನಲ್ಲಿ ಹೋಗಿ, ಸರ್ವೆ 4ನೆ ನಂಬರಿನ ವಾಯವ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು $2\frac{1}{2}$ ಫರ್ಲಾಂಗುಗಳ ದೂರದಲ್ಲಿ ಸಂಸ್ಥಾನ ಜಂಗಲಿಯ ಉತ್ತರ ಮೇರೆಯಲ್ಲಿ ಬಂದು ಸ್ಥಳದಲ್ಲಿ ಸದರಿ ಜಂಗಲಿಯನ್ನು ಬಿಡುತ್ತದೆ.

(2) ಬೆಳ್ಳೂರಿಂದ ಗುಬ್ಬಿಗಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು ಸುಮಾರು $\frac{1}{4}$ ಫರ್ಲಾಂಗು ಉದ್ದ, ವರ್ಷವೆಲ್ಲಾ ಜನರೂ, ದನಗಳೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. 1ನೆ ಆವರಣದ ಪಶ್ಚಿಮ ಮೇರೆಯ ಬಂದು ಸ್ಥಳದಲ್ಲಿ ಸರ್ವೆ 4ನೆ ನಂಬರಿನ ವಾಯವ್ಯ ಮೂಲೆಯಿಂದ ನೈರುತ್ಯಕ್ಕೆ ಸುಮಾರು 1 ಫರ್ಲಾಂಗು ದೂರದಲ್ಲಿ ಸಂಸ್ಥಾನ ಜಂಗ್ಲಿಯನ್ನು ಪ್ರವೇಶಿಸಿ, ಸರ್ವೆ 3ನೆ ನಂಬರಿನಲ್ಲಿ ನುಗ್ಗಿ ಉತ್ತರಕ್ಕೆ ಸುಮಾರು ಅರ್ಧ ಫರ್ಲಾಂಗುದೂರ ಹೋಗುತ್ತದೆ. ಮತ್ತು ಜಂಗ್ಲಿಯ ಉತ್ತರ ಮೇರೆಯ ಬಂದು ಸ್ಥಳದಲ್ಲಿ ಸರ್ವೆ 4ನೆ ನಂಬರಿನ ವಾಯವ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು ಬಂದು ಫರ್ಲಾಂಗು ದೂರದಲ್ಲಿ ಜಂಗ್ಲಿಯನ್ನು ಬಿಡುತ್ತದೆ.

3. ಬೆಳ್ಳೂರಿಂದ ಮಸ್ಕಾನಿಗೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು 3 ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳೂ, ದನಗಳೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಸರ್ವೆ 3ನೆ ನಂಬರಿನಲ್ಲಿ 1ನೆ ನಂಬರ್ ಆವರಣದ ದಕ್ಷಿಣ ಮೇರೆಯಲ್ಲಿ ಬಂದು ಸ್ಥಳದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ, ನೈರುತ್ಯಕ್ಕೆ ಮೂರು ಫರ್ಲಾಂಗುಗಳ ದೂರಹೋಗಿ 3ನೆ ನಂಬರ್ ಆವರಣದ ಉತ್ತರ ಮೇರೆಯಲ್ಲಿ ಬಂದು ಸ್ಥಳದಲ್ಲಿ ಬೆಳ್ಳೂರು ಗ್ರಾಮದ ಸರ್ವೆ 3ನೆ ನಂಬರಿನ ಆಗ್ನೇಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು ಮುಕ್ಕಾಲು ಫರ್ಲಾಂಗಿನ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(4) ಬೆಳ್ಳೂರಿನ ದಾಖ್ಲಾ ಗ್ರಾಮವಾದ ಹೆರೆಯಿಂದ ಮಸ್ತಾನಿಗೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು 2½ ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳೂ, ದನಗಳೂ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. ಸರ್ವೆ 26ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಒಂದು ಸ್ಥಳದಲ್ಲಿ ಅದೇ ನಂಬರಿನ ವಾಯವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 22 ಗಜಗಳ ದೂರದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ ನೈರುತ್ಯಕ್ಕೆ ಸುಮಾರು 2½ ಫರ್ಲಾಂಗುಗಳ ದೂರ ಹೋಗಿ, 3ನೆ ಆವರಣದ ಉತ್ತರ ಮೇರೆಯಲ್ಲಿ ಬಂದು ಸ್ಥಳದಲ್ಲಿ ಬೆಳ್ಳೂರು ಗ್ರಾಮದ ಸರ್ವೆ 30ನೆ ನಂಬರಿನ ನೈರುತ್ಯ ಮೂಲೆಯಿಂದ ಪೂರ್ವಕ್ಕೆ ಸುಮಾರು 1 ಫರ್ಲಾಂಗಿನ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(5) ಬೆಳ್ಳೂರಿಂದ ಮಾಚೆಕೊಪ್ಪಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು 2½ ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳೂ, ದನಗಳೂ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. 1ನೆ ನಂಬರ್ ಆವರಣದ ಪೂರ್ವ ಮೇರೆಯಲ್ಲಿ ಒಂದು ಸ್ಥಳದಲ್ಲಿ 43ನೆ ಸರ್ವೆ ನಂಬರಿನ ವಾಯವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 2 ಫರ್ಲಾಂಗುಗಳ ದೂರದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ ದಕ್ಷಿಣಕ್ಕೆ ಸುಮಾರು 2½ ಫರ್ಲಾಂಗುಗಳ ದೂರಹೋಗಿ, ಸರ್ವೆ 37ನೆ ನಂಬರಿನ ಉತ್ತರ ಮೇರೆಯಲ್ಲಿ ಬಂದು ಸ್ಥಳದಲ್ಲಿ ಅದರ ವಾಯವ್ಯ ಮೂಲೆಯಿಂದ ಪೂರ್ವಕ್ಕೆ ಸುಮಾರು ¼ ಫರ್ಲಾಂಗಿನ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(6) ಬೆಳ್ಳೂರಿಂದ ಅರನೆಲ್ಲಿಗೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು ಸುಮಾರು 1 ಮೈಲಿ 7 ಫರ್ಲಾಂಗುಗಳ ಉದ್ದ, ಜನಗಳೂ ದನಗಳೂ ವರ್ಷವೆಲ್ಲಾ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. 1ನೆ ನಂಬರಿನ ಆವರಣದ ಪೂರ್ವ ಮೇರೆಯಲ್ಲಿ ಬಂದು ಸ್ಥಳದಲ್ಲಿ 30ನೆ ಸರ್ವೆ ನಂಬರಿನ ಈಶಾನ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 1¼ ಫರ್ಲಾಂಗುಗಳ ದೂರದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ ಬೆಳ್ಳೂರು ಗ್ರಾಮದ ಸರ್ವೆ 50ನೆ ನಂಬರಿನಲ್ಲಿಯೂ ಅರನೆಲ್ಲಿ ಗ್ರಾಮದ ಸರ್ವೆ 11ನೆ ನಂಬರಿನಲ್ಲಿಯೂ ನುಗ್ಗಿ ಪೂರ್ವಕ್ಕೆ 1 ಮೈಲಿ 7 ಫರ್ಲಾಂಗುಗಳ ದೂರಹೋಗಿ ಅರನೆಲ್ಲಿ ಗ್ರಾಮದ ಸರ್ವೆ 12ನೆ ನಂಬರಿನ ವಾಯವ್ಯ ಮೂಲೆಯಲ್ಲಿ ಜಂಗಲಿಯನ್ನು ಬಿಡುತ್ತದೆ.

(7) ಅರನೆಲ್ಲಿಯಿಂದ ಆಯನೂರು ಹೈರೋಡಿಗೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು ಸುಮಾರು 1 ಮೈಲಿ ಉದ್ದ, ವರ್ಷವೆಲ್ಲಾ ಜನಗಳೂ, ದನಗಳೂ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. ಅರನೆಲ್ಲಿ ಗ್ರಾಮದಲ್ಲಿ 4ನೆ ನಂಬರ್ ಆವರಣದ 8ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಮಾಡಿ ಆಗ್ನೇಯವಾಗಿ ಸರ್ವೆ 18, 20 ಮತ್ತು 19ನೆ ನಂಬರುಗಳಲ್ಲಿ ನುಗ್ಗಿ ಸುಮಾರು 1 ಮೈಲಿಯ ವರೆಗೆ ಹೋಗಿ, ಅರನೆಲ್ಲಿ ಗ್ರಾಮದ ಸರ್ವೆ 18ನೆ ನಂಬರಿನ ಆಗ್ನೇಯ ಮೂಲೆಯಿಂದ ಉತ್ತರಕ್ಕೆ ಸುಮಾರು ¼ ಫರ್ಲಾಂಗಿನಲ್ಲಿ ಸದರಿ ಹೈರೋಡನ್ನು ಸೇರುತ್ತದೆ.

(8) ಆಯನೂರಿಂದ ಹನಗೆರೆಗೆ ಹೋಗುವ ಹೈ ರೋಡು, 22 ಗಜಗಳ ಅಗಲ ಮತ್ತು 2 ಮೈಲಿ 7 ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳೂ, ದನಗಳೂ, ಗಾಡಿಗಳೂ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. ಅರನೆಲ್ಲಿ ಗ್ರಾಮದ 18ನೆ ಸರ್ವೆ ನಂಬರಿನ ಮತ್ತು ಕರ್ಕುಜಿ ಗ್ರಾಮದ ಸರ್ವೆ 9, 8, 4, 3, 2 ಮತ್ತು 1ನೆ ನಂಬರುಗಳ ಪೂರ್ವ ಮೇರೆಗಳಲ್ಲಿ ಹನಗೆರೆ ಗ್ರಾಮದ ಸರ್ವೆ 2ನೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ.

(9) ಹರನಗೆರೆಯಿಂದ ವೆಂಕಂಣಹಳ್ಳಿಗೆ ಹೋಗುವ ಹೈರೋಡ್, 22 ಗಜಗಳ ಅಗಲ, 3 ಮೈಲಿ 4⅓ ಫರ್ಲಾಂಗುಗಳ ಉದ್ದ; ವರುಷವೆಲ್ಲಾ ಜನಗಳಿಗೂ, ದನಗಳಿಗೂ ಮತ್ತು ಗಾಡಿಗಳಿಗೂ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. ಹನಗೆರೆ ಗ್ರಾಮದ ಸರ್ವೆ 2ನೆ ನಂಬರಿನ ಪೂರ್ವ ಮೇರೆಯಲ್ಲಿ (8) ನೆ ನಂಬರ್ ದಾರಿಯ ಮುಂದಕ್ಕೆ 3¼ ಫರ್ಲಾಂಗುಗಳ ದೂರ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಹನಗೆರೆ ಗ್ರಾಮದ ಸರ್ವೆ 2, 7 ಮತ್ತು 4ನೆ ನಂಬರುಗಳಲ್ಲಿಯೂ ಮತ್ತು ಶಿರನೆಲ್ಲಿಗ್ರಾಮದ ಸರ್ವೆ 23ನೆ ನಂಬರಿನಲ್ಲಿಯೂ ನುಗ್ಗಿ ಸುಮಾರು 2 ಮೈಲಿ 3 ಫರ್ಲಾಂಗುಗಳ ದೂರ ಹೋಗಿ, ಬಸವನಗದ್ದೆ ಗ್ರಾಮದ ಸರ್ವೆ 8ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಜಂಗಲಿಯನ್ನು ಬಿಟ್ಟು, ಪುನಃ 10ನೆ ಆವರಣದಲ್ಲಿ ಸರ್ವೆ 6ನೆ ನಂಬರಿನ ಆಗ್ನೇಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು ¾ ಫರ್ಲಾಂಗುಗಳ ದೂರದಲ್ಲಿ ಸರ್ವೆ 6ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಬಂದು ಸ್ಥಳದಲ್ಲಿ ಜಂಗಲಿಯನ್ನು ಮತ್ತೆ ಪ್ರವೇಶಿಸಿ ದಕ್ಷಿಣಕ್ಕೆ ಸರ್ವೆ 27ನೆ ನಂಬರಿನಲ್ಲಿ ನುಗ್ಗಿ ಸುಮಾರು 2¼ ಫರ್ಲಾಂಗುಗಳ ದೂರ ಹೋಗಿ, ಸರ್ವೆ 21ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಜಂಗಲಿಯನ್ನು ಬಿಡುತ್ತದೆ; ಮತ್ತು ಅದೇ ಸರ್ವೆ ನಂಬರಿನ ಆಗ್ನೇಯ ಮೂಲೆಯಲ್ಲಿ ಜಂಗಲಿಯನ್ನು ಆಖೈರುಸಾರಿ ಪ್ರವೇಶಿಸಿ ಸರ್ವೆ 18ನೆ ನಂಬರಿನಲ್ಲಿ ನುಗ್ಗಿ ನೈರುತ್ಯಕ್ಕೆ ಸುಮಾರು 1¼ ಫರ್ಲಾಂಗುಗಳ ದೂರ ಹೋಗಿ ಪಶ್ಚಿಮಕ್ಕೆ ತಿರಿಗಿ ಅದೇ ಸರ್ವೆ ನಂಬರಿನಲ್ಲಿ 2½ ಫರ್ಲಾಂಗುಗಳ ದೂರ ಹೋಗಿ, ಸರ್ವೆ 18ನೆ ನಂಬರಿನ ನೈರುತ್ಯ ಮೂಲೆಯಿಂದ ದಕ್ಷಿಣಕ್ಕೆ ¼ ಫರ್ಲಾಂಗಿನ ದೂರದಲ್ಲಿ ಸಂಸ್ಥಾನ ಜಂಗಲಿಯ ದಕ್ಷಿಣ ಮೇರೆಯಲ್ಲಿ ಬಂದು ಸ್ಥಳದಲ್ಲಿ ಜಂಗಲಿಯನ್ನು ಬಿಡುತ್ತದೆ.

(10) ಹನಗೆರೆಯಿಂದ ಕಟ್ಟಹಳ್ಳಿಗೆ ಹೋಗುವ ಹೈರೋಡ್, 22 ಗಜಗಳ ಅಗಲ, ಮತ್ತು 7 ಮೈಲಿಗಳ ದೂರ, ವರುಷವೆಲ್ಲಾ ಜನಗಳಿಗೂ, ದನಗಳಿಗೂ ಮತ್ತು ಗಾಡಿಗಳಿಗೂ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. ಇದು ಹನಗೆರೆ ಗ್ರಾಮದ 7ನೆ ಸರ್ವೆ ನಂಬರಿನ ಉತ್ತರ ಮೇರೆಯಲ್ಲಿಯೂ ಸರ್ವೆ 7 ಮತ್ತು 5ನೆ ನಂಬರುಗಳ ಪೂರ್ವ ಮೇರೆಗಳಲ್ಲಿ ಈ ಕೊನೆಯ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಮತ್ತು ಶಿರನೆಲ್ಲಿ ಗ್ರಾಮದ ಸರ್ವೆ 8 ಮತ್ತು 12ನೆ ನಂಬರುಗಳ ಉತ್ತರ ಮೇರೆಗಳಲ್ಲಿ ಸದರಿ 12ನೆ ನಂಬರಿನ ಈಶಾನ್ಯ ಮೂಲೆಗೂ ಮತ್ತು ಸರ್ವೆ 13ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ಅತ್ಯಂತ ಉತ್ತರ ಮೂಲೆಗೂ 7 ಮೈಲಿಗಳ ದೂರದ ವರೆಗೆ ಹೋಗಿ ಅಲ್ಲಿ ಕಟ್ಟಹಳ್ಳಿ ಗ್ರಾಮದ ವಾಯವ್ಯ ಮೂಲೆಯ ಬಾಂದುಗಳನ್ನು ಸೇರುತ್ತದೆ.

(11) ಹನಗೆರೆ ಗ್ರಾಮದಲ್ಲಿ 5ನೆ ಆವರಣದಿಂದ ಶಿರನೆಲ್ಲಿ ಮತ್ತು ಹನಗೆರೆ ಗ್ರಾಮಗಳಲ್ಲಿ 6ನೆ ಆವರಣಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, 2 ¼ಫರ್ಲಾಂಗುಗಳ ಉದ್ದ, ವರುಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟುರತಕ್ಕದ್ದು. ಇದು 5ನೆ ಆವರಣದ ಗ್ರಾಮ ನಿವೇಶನದ ಈಶಾನ್ಯ ಮೂಲೆಯಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ ಪೂರ್ವಕ್ಕೆ ಹನಗೆರೆ ಗ್ರಾಮದ ಸರ್ವೆ 2, 7 ಮತ್ತು 6ನೆ ನಂಬರುಗಳಲ್ಲಿ ನುಗ್ಗಿ 2¼ ಫರ್ಲಾಂಗುಗಳ ದೂರ ಹೋಗಿ ಸರ್ವೆ 6ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಜಂಗಲಿಯನ್ನು ಬಿಡುತ್ತದೆ.

(12) (9)ನೆ ನಂಬರ್ ರಸ್ತೆಯಿಂದ ತಿರನೆಲ್ಲಿ ಗ್ರಾಮದ 6ನೆ ನಂಬರ್ ಆವರಣಕ್ಕೆ ಹೋಗುವ ಕಾಲು ದಾರಿ, 6 ಅಡಿಗಳ ಅಗಲ, ½ ಫರ್ಲಾಂಗು ಉದ್ದ, ವರುಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು 5ನೆ ನಂಬರ್ ಆವರಣದಲ್ಲಿ 8ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು ½ ಫರ್ಲಾಂಗು ದೂರದಲ್ಲಿ ರಸ್ತೆಯಲ್ಲಿ ಬಂದು ಸ್ಥಳದಲ್ಲಿ (9)ನೆ ನಂಬರ್ ದಾರಿಯಿಂದ ಕವಲಾಗಿ ಹೊರಟ್ಟು, ಪೂರ್ವಕ್ಕೆ ಸರ್ವೆ 4ನೆ ನಂಬರಿನಲ್ಲಿ ½ ಫರ್ಲಾಂಗು ದೂರದ ವರಗೆ ಹೋಗಿ 6ನೆ ನಂಬರ್ ಆವರಣದಲ್ಲಿ 1ನೆ ಸರ್ವೆ ನಂಬರಿನ ನೈರುತ್ಯ ಮೂಲೆಯಲ್ಲಿ ಜಂಗಲಿಯನ್ನು ಬಿಡುತ್ತದೆ.

(13) ತಿರನೆಲ್ಲಿ ಗ್ರಾಮದ 6ನೆ ಆವರಣದಿಂದ 8ನೆ ಆವರಣಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, ¾ ಫರ್ಲಾಂಗುಗಳ ಉದ್ದ, ವರುಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು 6ನೆ ಆವರಣದಲ್ಲಿ 8ನೆ ಸರ್ವೆ ನಂಬರಿನ ಪೂರ್ವ ಮೇರೆಯಲ್ಲಿ ಬಂದು ಸ್ಥಳದಲ್ಲಿ ಅದರ ಆಗ್ನೇಯ ಮೂಲೆಯಿಂದ ಉತ್ತರಕ್ಕೆ ಸುಮಾರು 2¼ ಫರ್ಲಾಂಗುಗಳ ದೂರದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ ತಿರನೆಲ್ಲಿ ಗ್ರಾಮದ ಸರ್ವೆ 12 ಮತ್ತು 15ನೆ ನಂಬರುಗಳ ಮೂಲಕ 3¾ ಫರ್ಲಾಂಗುಗಳ ದೂರ ಹೋಗಿ, ಗ್ರಾಮ ನಿವೇಕನದ ಉತ್ತರ ಮೇರೆಯಲ್ಲಿ ಬಂದು ಸ್ಥಳದಲ್ಲಿ ಅದರ ವಾಯವ್ಯ ಮೂಲೆಯಿಂದ ಪೂರ್ವಕ್ಕೆ ಸುಮಾರು ¼ ಫರ್ಲಾಂಗು ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(14) ತಿರನೆಲ್ಲಿ ಗ್ರಾಮದಲ್ಲಿ 8ನೆ ಆವರಣದಿಂದ ಬನ್ನವನಗದ್ದೆ ಗ್ರಾಮದಲ್ಲಿ 10ನೆ ಆವರಣಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, ಸುಮಾರು 1 ಮೈಲಿ 1 ಫರ್ಲಾಂಗು ಉದ್ದ, ವರುಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು 8ನೆ ಆವರಣದಲ್ಲಿ ಗ್ರಾಮ ನಿವೇಕನದ ಉತ್ತರ ಮೇರೆಯ ಬಂದು ಸ್ಥಳದಲ್ಲಿ 13ನೆ ನಂಬರ್ ದಾರಿಯನ್ನು ಪ್ರವೇಶಿಸುವ ಸ್ಥಳದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸುತ್ತದೆ. ಮತ್ತು ಪಶ್ಚಿಮಕ್ಕೆ ತಿರನೆಲ್ಲಿ ಗ್ರಾಮದ ಸರ್ವೆ 22, 20 ಮತ್ತು 21ನೆ ನಂಬರುಗಳ ಮೂಲಕ 1 ಮೈಲಿ 1 ಫರ್ಲಾಂಗು ದೂರ ಹೋಗಿ 9ನ ನಂಬರ್ ದಾರಿಯನ್ನು ಅದು 10ನೆ ನಂಬರ್ ಆವರಣವನ್ನು ಪ್ರವೇಶಿಸುವ ಸ್ಥಳದಲ್ಲಿ ಸೇರುತ್ತದೆ.

(15) ಕಾನಂಗಿಯಿಂದ ಅಳಶಿ ಗ್ರಾಮದಲ್ಲಿ 12ನೆ ಆವರಣಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, 2 ಮೈಲಿ 5½ ಫರ್ಲಾಂಗುಗಳ ಉದ್ದ, ವರುಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು ಬನವನಗದ್ದೆ ಗ್ರಾಮದ 18ನೆ ಸರ್ವೆ ನಂಬರಿನ ವಾಯವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 1 ಫರ್ಲಾಂಗು ದೂರದಲ್ಲಿ ಜಂಗಲಿಯ ದಕ್ಷಿಣ ಮೇರೆಯಲ್ಲಿ ಬಂದು ಸ್ಥಳದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸುತ್ತದೆ, ಮತ್ತು ಪೂರ್ವಕ್ಕೆ ಸರ್ವೆ 18ನೆ ನಂಬರಿನ ಮೂಲಕ ಸುಮಾರು 3 ಫರ್ಲಾಂಗುಗಳ ದೂರ ಹೋಗಿ, ಸರ್ವೆ 12ನೆ ನಂಬರಿನ ಅತ್ಯಂತ ಉತ್ತರ ಮೂಲೆಯಲ್ಲಿ 10ನೆ ನಂಬರ್ ಆವರಣವನ್ನು ಪ್ರವೇಶಿಸಿ, 10ನ ಆವರಣದಲ್ಲಿ ಸರ್ವೆ 25ನೆ ನಂಬರಿನ ಪೂರ್ವ ಮೇರೆಯ ಬಂದು ಸ್ಥಳದಲ್ಲಿ, ಅದರ ಆಗ್ನೇಯ ಮೂಲೆಯಿಂದ ಉತ್ತರಕ್ಕೆ ಸುಮಾರು ½ ಫರ್ಲಾಂಗು ದೂರದಲ್ಲಿ ಪುನಃ ಜಂಗಲಿಯನ್ನು ಪ್ರವೇಶಿಸಿ, ಸರ್ವೆ 27ನೆ ನಂಬರಿನ ಮೂಲಕ್ಕೆ 2¾ ಫರ್ಲಾಂಗುಗಳ ದೂರ ಹೋಗಿ, ಸರ್ವೆ 5ನೆ ನಂಬರಿನ ಪಶ್ಚಿಮ ಮೇರೆಯ ಬಂದು ಸ್ಥಳದಲ್ಲಿ ಅದರ ನೈರುತ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು ½ ಫರ್ಲಾಂಗು ದೂರದಲ್ಲಿ 10ನೆ ಆವರಣವನ್ನು ಪ್ರವೇಶಿಸಿ, 10ನೆ ನಂಬರ್ ಆವರಣದಲ್ಲಿ 4ನೆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿ ಬಂದು ಸ್ಥಳದಲ್ಲಿ ಅದರ ವಾಯವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 44 ಗಜಗಳ ದೂರದಲ್ಲಿ ಪುನಃ ಜಂಗಲಿಯನ್ನು ಪ್ರವೇಶಿಸಿ, ಉತ್ತರಕ್ಕೆ ಬನವನಗದ್ದೆ ಗ್ರಾಮದ 28ನೆ ನಂಬರಿನ ಮೂಲಕ 3 ಫರ್ಲಾಂಗುಗಳ ದೂರ ಹೋಗಿ, ವಾಯವ್ಯಕ್ಕೆ ಅದೇ ನಂಬರಿನಲ್ಲಿಯೂ ಅಳಶಿ ಗ್ರಾಮದ 16ನೆ ಸರ್ವೆ ನಂಬರಿನಲ್ಲಿಯೂ ಸುಮಾರು 1 ಮೈಲಿ ¼ ಫರ್ಲಾಂಗುಗಳ ದೂರ ಹೋಗಿ, ಅಳಶಿ ಗ್ರಾಮ ನಿವೇಕನದ ಆಗ್ನೇಯ ಮೂಲೆಯಲ್ಲಿ ಆ ಗ್ರಾಮದ 12ನೆ ಆವರಣವನ್ನು ಪ್ರವೇಶಿಸುತ್ತದೆ.

(16) ವೆಂಕಣ್ಣಹಳ್ಳಿಯಿಂದ ಅಳಶಿ ಗ್ರಾಮದ 12ನೆ ಆವರಣಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, 1 ಮೈಲಿ 7½ ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು ಕೊಂಬಿನಕೈ ಗ್ರಾಮದ ಸರ್ವೆ 13ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಸಂಸ್ಥಾನದ ಜಂಗಲಿಯನ್ನು ಪ್ರವೇಶಿಸುತ್ತದೆ. ಮತ್ತು ಕೊಂಬಿನಕೈ ಗ್ರಾಮದ ಸರ್ವೆ 13, 12 ಮತ್ತು 10ನೆ ಮತ್ತು ಅಳಶಿ ಗ್ರಾಮದ 16ನೆ ನಂಬರುಗಳ ಮೂಲಕ ವಾಯವ್ಯಕ್ಕೆ 1 ಮೈಲಿ 7½ ಫರ್ಲಾಂಗುಗಳ ದೂರ ಹೋಗಿ ಅಳಶಿ ಗ್ರಾಮ ನಿವೇಕನದ ದಕ್ಷಿಣ ಮೇರೆಯಲ್ಲಿ ಬಂದು ಸ್ಥಳದಲ್ಲಿ ಅದರ ನೈರುತ್ಯ ಮೂಲೆಯಿಂದ ಪೂರ್ವಕ್ಕೆ ಸುಮಾರು 40 ಗಜಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(17) ಅಳಶಿ ಗ್ರಾಮದ 12ನೆ ನಂಬರ್ ಆವರಣದಿಂದ ದೋಬ್ಬೆಲು ಗ್ರಾಮದ 13ನೆ ನಂಬರ್ ಆವರಣಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಸುಮಾರು 1 ಫರ್ಲಾಂಗು ಉದ್ದ, ವರ್ಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು 12ನೆ ಆವರಣದಲ್ಲಿ ಸರ್ವೆ 5ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ ಸುಮಾರು 1 ಫರ್ಲಾಂಗು ದೂರ ಸರ್ವೆ 17ನೆ ನಂಬರಿನ ಮೂಲಕ ವಾಯವ್ಯಕ್ಕೆ ಹೋಗಿ, ದೋಬ್ಬೆಲು ಗ್ರಾಮದ 13ನೆ ನಂಬರ್ ಆವರಣದಲ್ಲಿ 51ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯಲ್ಲಿ ಜಂಗಲಿಯನ್ನು ಬಿಡುತ್ತದೆ.

(18) ದೋಬ್ಬೆಲು ಗ್ರಾಮದ 13ನೆ ಆವರಣದಿಂದ ಹಾರಂಬ್ಬಳ್ಳಿಗೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು 6 ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು 13ನೆ ನಂಬರ್ ಆವರಣ ಪಶ್ಚಿಮ ಮೇರೆಯಲ್ಲಿ ಬಂದು ಸ್ಥಳದಲ್ಲಿ ಅದರ ನೈರುತ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 22 ಗಜಗಳ ದೂರದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸಿ ಪಶ್ಚಿಮಕ್ಕೆ ಸರ್ವೆ 51ನೆ ನಂಬರಿನ ಮೂಲಕ್ಕೆ 6 ಫರ್ಲಾಂಗುಗಳ ದೂರ ಹೋಗಿ ಸಂಸ್ಥಾನ ಜಂಗಲಿಯ ಪಶ್ಚಿಮ ಮೇರೆಯಲ್ಲಿ ಬಂದು ಸ್ಥಳದಲ್ಲಿ ಸರ್ವೆ 51ನೆ ನಂಬರಿನ ವಾಯವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು ¼ ಫರ್ಲಾಂಗುಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(19) 13ನೆ ಆವರಣದಿಂದ ಕೋಣಂದೂರಿಗೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, ಮತ್ತು ಸುಮಾರು 6 ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳಿಗೂ, ದನಗಳಿಗೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು 13ನೆ ಆವರಣದ ಪಶ್ಚಿಮ

ಮೇರೆಯಲ್ಲಿ ಬಂದು ಸ್ಥಳದಲ್ಲಿ ಸದರಿ ಆವರಣದಲ್ಲಿ 15ನೆ ಸರ್ವೆ ನಂಬರಿನ ವಾಯವ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು ¾ ಫರ್ಲಾಂಗುಗಳ ದೂರದಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸುತ್ತದೆ. ಮತ್ತು ದಕ್ಷಿಣಕ್ಕೆ 16ನೆ ಸರ್ವೆ ನಂಬರಿನಲ್ಲಿ ಸುಮಾರು ½ ಫರ್ಲಾಂಗು ದೂರ ಹೋಗಿ, ಸರ್ವೆ 14ನೆ ನಂಬರಿನಲ್ಲಿ ಪಶ್ಚಿಮಕ್ಕೆ ತಿರಿಗಿ 5½ ಫರ್ಲಾಂಗುಗಳದೂರ ಹೋಗಿ ಸಂಸ್ಥಾನ ಜಂಗಲಿಯ ಪಶ್ಚಿಮ ಮೇರೆಯಲ್ಲಿ ಬಂದು ಸ್ಥಳದಲ್ಲಿ ಸರ್ವೆ 14ನೆ ನಂಬರಿನ ನೈರುತ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 1½ ಫರ್ಲಾಂಗುಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(20) ಮುಸ್ಕಾನಿ ಗ್ರಾಮದ 14ನೆ ಆವರಣದಿಂದ ವಡಾಹೊಸಹಳ್ಳಿಗೆ ಹೋಗುವ ಕಾಲುದಾರಿ, 6 ಅಡಿಗಳ ಮತ್ತು 4½ ಫರ್ಲಾಂಗುಗಳ ಉದ್ದ, ವರ್ಷವೆಲ್ಲಾ ಜನಗಳಿಗೂ, ದನಗಳಿಗೂ ತೆರವಿರತಕ್ಕದ್ದು. 14ನೆ ನಂಬರ್ ಆವರಣದ 15ನೆ ಸರ್ವೆ ನಂಬರಿನ ಅತ್ಯಂತ ಉತ್ತರ ಮೂಲೆಯಲ್ಲಿ ಸಂಸ್ಥಾನ ಜಂಗಲಿಯನ್ನು ಪ್ರವೇಶಿಸುತ್ತದೆ ಮತ್ತು ಪಶ್ಚಿಮಕ್ಕೆ 4½ ಫರ್ಲಾಂಗುಗಳ ದೂರ ಸರ್ವೆ 13 ಮತ್ತು 12ನೆ ನಂಬರ್ ಗಳಲ್ಲಿ, ನುಗ್ಗಿಹೋಗಿ ಸರ್ವೆ 12ನೆ ನಂಬರಿನ ನೈರುತ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು ಒಂದು ಫರ್ಲಾಂಗು ದೂರದಲ್ಲಿ ಸಂಸ್ಥಾನ ಜಂಗಲಿಯ ಪಶ್ಚಿಮ ಮೇರೆಯ ಬಂದು ಸ್ಥಳದಲ್ಲಿ ಜಂಗಲಿಯನ್ನು ಬಿಡುತ್ತದೆ.

(21) ಅರನೆಲ್ಲಿ, ತಿರನೆಲ್ಲಿ, ಹನಗೆರೆ, ಮುಸ್ಕಾನಿ ದೋಜ್ಯೆಲು, ಬೆಳ್ಳೂರು, ಕೊಂಬಿನಕ್ಕೈ, ಕರಕುಚ್ಚಿ, ಬಸವನಗದ್ದೆ ಮತ್ತು ಅಲಶಿ ಗ್ರಾಮಗಳ ಜಮೀನುಗಳಲ್ಲಿ ಹರಿಯುವ ಹಳ್ಳಗಳ ನೀರನ್ನು ಜನಗಳೂ, ದನಗಳೂ ಉಪಯೋಗಿಸುವ ಹಕ್ಕನ್ನು ಸದರಿ ಗ್ರಾಮದ ರೈತರು ಅನಾದಿಯಾಗಿ ಬಳಸುವ ದಾರಿಗಳಿಂದ ಉಪಯೋಗಿಸಿಕೊಳ್ಳುವಂತೆ ಮುಂಜಾರು ಮಾಡಿ ಇರುತ್ತದೆ.

ಬಿ. ಸದರಿ ತಾಕಿನಲ್ಲಿ ಈ ಕೆಳಗೆ ನಮೂದು ಮಾಡಿರುವ ಹಕ್ಕುಗಳನ್ನು ಮುಂಜಾರ್ಮಾಡಿ ಇರುತ್ತೆ.

ಅರನೆಲ್ಲಿ	...	i. ಒಂದು ಸಂಸಾರಕ್ಕೆ ವರ್ಷ ಒಂದಕ್ಕೆ 2 ಹೊರೆ ಬೆತ್ತವನ್ನು ಮುಫತ್ತಾಗಿ ತೆಗೆದುಕೊಳ್ಳುವುದು.
ಹನಗೆರೆ	..	ii. ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಬಣ್ಣಗದ ಮರಗಳನ್ನು ಮುಫತ್ತಾಗಿ ಉಪಯೋಗಿಸಿಕೊಳ್ಳುವುದು.
ತಿರನೆಲ್ಲಿ	..	iii. ಬಳ್ಳಿಗಳನ್ನೂ ಬೆಂಡೆ ನಾರುಗಳನ್ನೂ ಮುಫತ್ತು ತೆಗೆದುಕೊಳ್ಳುವುದು.
ಕೊಂಬಿನಕ್ಕೈ	...	iv. ಸೀನಿಯರೇಜ್ ಎಂಬ ರಾಜಾಯದ ಅನುಕೂಲವಾದ ದರಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ನಾಟುವನ್ನು ಕೊಡುವುದು.
ಬಸವನಗದ್ದೆ	...	i. ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಬಣ್ಣಗಿದ ಮರಗಳನ್ನು ಮುಫತ್ತಾಗಿ ಉಪಯೋಗಿಸಿಕೊಳ್ಳುವುದು.
		ii. ಬಳ್ಳಿಗಳನ್ನೂ ಬೆಂಡೆನಾರುಗಳನ್ನೂ ಮುಫತ್ತಾಗಿ ಉಪಯೋಗಿಸಿಕೊಳ್ಳುವುದು.
		iii. ಸೀನಿಯರೇಜ್ ಎಂಬ ರಾಜಾಯದ ಅನುಕೂಲವಾದ ದರಗಳಲ್ಲಿ ಮನೆ ಕಟ್ಟುವ ನಾಟುಗಳನ್ನು ಕೊಡುವುದು.
ಅಲಶಿ	..	i. ತರಗತಿ ವಿಂಗಡಿಸದ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಬಣ ಮರಗಳನ್ನು ಮುಫತ್ತಾಗಿ ಉಪಯೋಗಿಸಿಕೊಳ್ಳುವುದು.
		ii. ಬಳ್ಳಿಗಳು ಮತ್ತು ಬೆಂಡೆನಾರುಗಳನ್ನು ಮುಫತ್ತಾಗಿ ತೆಗೆದುಕೊಳ್ಳುವುದು.
ಮುಸ್ಕಾನಿ ಮತ್ತು ದೋಜ್ಯೆಲು.		i. ತರಗತಿ ವಿಂಗಡಿಸದ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಮರಗಳನ್ನು ಮುಫತ್ತಾಗಿ ತೆಗೆದುಕೊಳ್ಳುವುದು.
		ii. ಸಂಸಾರ ಒಂದಕ್ಕೆ ವರುಷ ಒಂದಕ್ಕೆ 2 ಹೊರೆಗಳ ಬೆತ್ತ ಮುಫತ್ತು.
		iii. ಒಂದು ಸಂಸಾರಕ್ಕೆ ವರುಷ ಒಂದಕ್ಕೆ ಒಂದು ತಲೆಹೊರೆ ದಡಸಲಕಡ್ಡಿ ಮುಫತ್ತು.
		iv. ಒಂದು ಸಂಸಾರಕ್ಕೆ ವರುಷ ಒಂದಕ್ಕೆ 3 ತಲೆಹೊರೆ ವಾಟೆ.
		v. ಬಳ್ಳಿಗಳು ಮತ್ತು ಬೆಂಡೆನಾರುಗಳು ಮುಫತ್ತು.
		vi. ಮನೆ ಕಟ್ಟುವ ನಾಟುವನ್ನು ಸೀನಿಯರೇಜ್ ಎಂಬ ರಾಜಾಯದ ಅನುಕೂಲವಾದ ದರದಲ್ಲಿ ಕೊಡುವುದು.
ಬೆಳ್ಳೂರು	..	i. ತರಗತಿ ವಿಂಗಡಿಸದ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಮರಗಳನ್ನು ಮುಫತ್ತಾಗಿಕೊಡುವುದು.
		ii. ಒಂದು ಸಂಸಾರಕ್ಕೆ ವರ್ಷ ಒಂದಕ್ಕೆ 1 ತಲೆ ಹೊರೆಯ ಮೇರೆಗೆ ದಡಸಲಕಡ್ಡಿ ಮುಫತ್ತು.
		iii. ಬಳ್ಳಿಗಳು ಮತ್ತು ಬೆಂಡೆನಾರುಗಳು ಮುಫತ್ತು.
		iv. ಮನೆಕಟ್ಟುವ ನಾಟುವನ್ನು ಅನುಕೂಲವಾದ ಸೀನಿಯರೇಜ್ ಎಂಬ ರಾಜಾಯದ ದರದಲ್ಲಿ ಕೊಡುವುದು.

ಆಹುಗಳು ಹೊರತು ಬೆಳ್ಳೂರುಗ್ರಾಮದ 297 ಜಾನುವಾರುಗಳನ್ನೂ ಜೋಜ್ಯೆಲು ಗ್ರಾಮದ 156 ಜಾನುವಾರುಗಳನ್ನೂ ಜಾನುವಾರು ಬಂಡಕ್ಕೆ ಬಂದಾಣಿಯ ಮೇರೆಗೆ ಹುಲ್ಲುಬನ್ನಿ ಕೊಟ್ಟು ಮೇಯಿಸಿಕೊಳ್ಳಬಹುದು.

ಷರಾ: ಈ ರಿಯಾಯಿತಿಗಳನ್ನೆಲ್ಲಾ ಆಯಾಯ ಗ್ರಾಮದ ಸರಹದ್ದಿನೊಳಗೆ ಇರುವ ಸಂಸ್ಥಾನ ಜಂಗಲಿಯ ಭಾಗದಲ್ಲಿ ಉಪಯೋಗಿಸಿಕೊಳ್ಳತಕ್ಕದ್ದು.

2. ಮೊತ್ತವನ್ನು ನಿಷ್ಕರ್ಷೆ ಮಾಡದೆ ಇರುವ ಸ್ಥಳದಲ್ಲಿ, ರೈತರ ಹಕ್ಕುಗಳ ನಿಬಂಧನೆಗಳ ಮೇರೆಗೆ ಕೊಡಬಹುದಾದ ಮೊತ್ತವೆಂದು ಅರ್ಥ.

ನೇಗಿಲು ಬಂದಕ್ಕೆ 8 ಹೊರೆಗಳ ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ನಾಟುವನ್ನೂ ಮತ್ತು ಕುಟುಂಬ ಬಂದಕ್ಕೆ 2 ಗಾಡಿ ಹುಲ್ಲನ್ನೂ ಸಂಸ್ಥಾನ ಜಂಗಲಿಯಿಂದ ತೆಗೆದುಕೊಂಡು ಹೋಗಬಹುದು.